ನಾನು ಕಂಡ ವಿವೇಕಾನಂದ



ಡಾ.ಆರ್. ಬಾಲಸುಬ್ರಹ್ಮಣ್ಯಂ

# ಪಟಾಕಿ ಹೊಡೆಯುವುದಷ್ಟೇ ದೇಶಭಕ್ತಿ ಅಲ್ಲ

ದೇಶಭಕ್ತಿ ಎಂದರೆ ಭಾರತವು ಕ್ರಿಕೆಟ್ ಪಂದ್ಯದಲ್ಲಿ ಗೆದ್ದಾಗ, ಅದರಲ್ಲೂ ಪಾಕಿಸ್ತಾನದ ವಿರುದ್ಧ ಜಯ ಸಾಧಿಸಿದಾಗ ಪಟಾಕಿ ಸಿಡಿಸಿ ಸಂಭ್ರಮಪಡುವಷ್ಟಕ್ಕೇ ಸೀಮಿತ ಆಗಿಬಿಟ್ಟಿರುವ ಕಾಲಘಟ್ಟದಲ್ಲಿ ಈಗ ನಾವಿದ್ದೇವೆ. ತ್ರಿವರ್ಣ ಧ್ವಜವನ್ನು ಬೀಸುವುದು, 'ಭಾರತ್ ಮಾತಾ ಕಿ ಜೈ' 'ಜೈ ಹಿಂದ್' ಎಂಬಂತಹ ಘೋಷಣೆಗಳನ್ನು ಕೂಗುವುದು ಈಗ ಬೀದಿ ಬದಿ ರಾಷ್ಟ್ರೀಯತೆಯ ಸಂಕೇತ ಆಗಿಬಿಟ್ಟಿದೆ. ಇಂತಹ ಪರಿಸ್ಥಿತಿಯಲ್ಲಿ ದೇಶಭಕ್ತರಾದ ಭಗತ್ ಸಿಂಗ್, ಚಂದ್ರಶೇಖರ ಆಜಾದ್, ಮಹಾತ್ಮ ಗಾಂಧಿ, ಸುಭಾಷ್‌ಚಂದ್ರ ಬೋಸ್ ಅವರಂತಹವರ ಜೀವನ ಮತ್ತು ಕಾಲಘಟ್ಟವನ್ನು ನಾವು ಯಾವ ದೃಷ್ಟಿಕೋನದಿಂದ ನೋಡಬಹುದು? ನಮ್ಮ ದೇಶಭಕ್ತಿಯ ಅಭಿವ್ಯಕ್ತಿಯು ಕೇವಲ ಘೋಷಣೆ ಕೂಗುವ ಮಟ್ಟಕ್ಕಿಂತ ಮುಂದೆ ಹೋಗಿ, ರಚನಾತ್ಮಕ ಮತ್ತು ಫಲಪ್ರದ ಆಗುವ ರೀತಿಯಲ್ಲಿ ಇರಬಲ್ಲದೇ?

ತಮ್ಮ ಜೀವಿತದ ಪ್ರತಿ ಕ್ಷಣವೂ ರಾಷ್ಟ್ರದ ಪ್ರಗತಿಗೇ ಮುಡಿಪು ಎಂದು ನಂಬಿಕೊಂಡಿದ್ದ ನಮ್ಮ ಬಹುತೇಕ ನಾಯಕರು ಸ್ವಾಮಿ ವಿವೇಕಾನಂದರಿಂದ ಸ್ಫೂರ್ತಿ ಪಡೆದಿದ್ದರು ಎಂದು ಹೇಳಲಾಗುತ್ತದೆ. ನಾವು ಬಹುತೇಕರು ಇಂದಿಗೂ ಸ್ವಾಮಿ ವಿವೇಕಾನಂದರನ್ನು ಅಖಂಡ ರಾಷ್ಟ್ರೀಯವಾದಿ ಎಂದೇ ಪರಿಗಣಿಸುತ್ತೇವೆ. ಹಾಗಿದ್ದರೆ ರಾಷ್ಟ್ರೀಯವಾದವನ್ನು ಸ್ವಾಮೀಜಿ ಯಾವ ರೀತಿ ಗ್ರಹಿಸಿದ್ದರು? ಪಾಶ್ಚಿಮಾತ್ಯ ರಾಷ್ಟ್ರಕ್ಕೆ ಎರಡನೇ ಬಾರಿ ಭೇಟಿ ನೀಡುವ ಕೆಲವೇ ದಿನಗಳ ಮುನ್ನ 1897ರಲ್ಲಿ ನಡೆದ ಒಂದು ಘಟನೆಯು ಈ ಬಗ್ಗೆ ಸ್ವಲ್ಪ ಮಟ್ಟಿನ ಬೆಳಕು ಚೆಲ್ಲುತ್ತದೆ. ಅವು ತೀವ್ರ ಬರಗಾಲದ ದಿನಗಳಾಗಿದ್ದವು. ಬರಪೀಡಿತರ ಬಗ್ಗೆ ಸ್ವಾಮೀಜಿ ಅಪಾರ ಕಳಕಳಿ ಹೊಂದಿದ್ದರು. ನೊಂದವರ ಅಳುವಿನ ದನಿ ಅವರ ಹೃದಯವನ್ನು ತಟ್ಟುತ್ತಿತ್ತು. ಅವರೆಲ್ಲರ ಸಂಕಟ ಪರಿಹರಿಸುವ ಬಯಕೆಯನ್ನು ಅವರು ಹೊಂದಿದ್ದರು. ತನ್ನ ದೇಶದ ಜನರ ಬಗ್ಗೆ ಸ್ವಾಮೀಜಿ ಹೊಂದಿದ್ದ ಅಪಾರ ಕಳಕಳಿ, ಸಹಾನುಭೂತಿ ಅಚ್ಚರಿ ಹುಟ್ಟಿಸುವಂತಿತ್ತು. ಕೆಲವು ಸಂದರ್ಭಗಳಲ್ಲಿ, ಸಿದ್ಧಾಂತ ಮತ್ತು ತತ್ವಜ್ಞಾನದ ಬಗ್ಗೆ ಚರ್ಚಿಸಲು ಬರುತ್ತಿದ್ದ ಪಂಡಿತರಿಗೆ, ಸದಾ ಬರಪೀಡಿತರ ಬಗೆಗೇ ಚಿಂತಿಸುತ್ತಿದ್ದ ಸ್ವಾಮೀಜಿಯ ಜೊತೆಗಿನ ಮಾತುಕತೆ ಬಹಳ ನೀರಸ ಎನಿಸುತ್ತಿತ್ತು.

ಈ ಸಂದರ್ಭದಲ್ಲಿ ಒಮ್ಮೆ 'ಹಿತವಾದಿ' ಪತ್ರಿಕೆಯ ಸಂಪಾದಕರಾದ ಪಂಡಿತ್ ಸಖಾರಾಮ್ ಗಣೇಶ್ ದೇವುಸ್ಕರ್ ಅವರು ತಮ್ಮ ಇಬ್ಬರು ಸ್ನೇಹಿತರೊಟ್ಟಿಗೆ ಸ್ವಾಮೀಜಿಯನ್ನು ಕಾಣಲು ಬಂದಿದ್ದರು. ಇವರಲ್ಲಿ ಒಬ್ಬರು ಪಂಜಾಬ್‌ನವರು ಎಂದು ತಿಳಿದ ಸ್ವಾಮೀಜಿ, ಆ ಪ್ರಾಂತ್ಯದ ಅಗತ್ಯಗಳು, ಅದರಲ್ಲೂ ಅಲ್ಲಿನ ಆಹಾರದ ಅಭಾವ, ಅದನ್ನು ಸರಿಪಡಿಸುವ ಬಗೆ ಎಲ್ಲದರ ಬಗ್ಗೆಯೂ ಮಾತುಕತೆ ನಡೆಸಿದರು. ಬಡವರಿಗೆ ಶಿಕ್ಷಣ ನೀಡುವಲ್ಲಿ ಉಳ್ಳವರ ಕರ್ತವ್ಯ ಮತ್ತು ಅಂತಹ ಜನರ ಸಾಮಾಜಿಕ ಸ್ಥಿತಿಗತಿಯನ್ನು ಮೇಲಕ್ಕೆ ಎತ್ತುವ ಅಗತ್ಯದ ಬಗ್ಗೆಯೂ ಚರ್ಚೆ ಹೊರಳಿತು. ಹೊರಡುವ ಮುನ್ನ ಪಂಜಾಬ್‌ನ ವ್ಯಕ್ತಿಯು 'ಸ್ವಾಮಿ  ಧರ್ಮದ ಬಗ್ಗೆ ವಿವಿಧ ಬಗೆಯ ಉಪದೇಶಗಳನ್ನು ನಿಮ್ಮಿಂದ ಕೇಳುವ ಮಹಾನ್ ನಿರೀಕ್ಷೆಯಿಂದ ನಾವು ಇಲ್ಲಿಗೆ ಬಂದಿದ್ದೆವು. ದುರದೃಷ್ಟವಶಾತ್ ನಮ್ಮ ಮಾತುಕತೆ ನೀರಸ ವಿಷಯಗಳತ್ತ ತಿರುಗಿತು. ನಮ್ಮ ಸಮಯ ವ್ಯರ್ಥವಾಯಿತು ಎಂದು ನನಗನಿಸುತ್ತಿದೆ' ಎಂದು ವಿನಯವಾಗಿಯೇ ವಿಷಾದ ವ್ಯಕ್ತಪಡಿಸಿದರು.

ಇದನ್ನು ಕೇಳಿದ ಸ್ವಾಮೀಜಿ ಅತ್ಯಂತ ಗಂಭೀರರಾದರು ಮತ್ತು 'ನನ್ನ ದೇಶದ ಬೀದಿ ನಾಯಿ ಹಸಿದಿದ್ದರೂ ಅದಕ್ಕೆ ಆಹಾರ ನೀಡಿ ಅದರ ಬಗ್ಗೆ ಕಾಳಜಿ ವಹಿಸುವ ಬಗ್ಗೆಯೇ ನನ್ನ ಧರ್ಮ ಚಿಂತಿಸುತ್ತದೆ. ಇಲ್ಲದಿದ್ದರೆ ಅದು ಒಂದು ಧರ್ಮವೇ ಅಲ್ಲ ಅಥವಾ ಅದು ಅಧರ್ಮ ಆಗಿರುತ್ತದೆ!' ಎಂದು ಹೇಳಿದರು. ಸ್ವಾಮೀಜಿಯ ಈ ಮಾತುಗಳನ್ನು ಕೇಳಿ ಮೂವರೂ ಸಂದರ್ಶಕರು ಮೂಕವಿಸ್ಮಿತರಾದರು. ಸ್ವಾಮೀಜಿ ತೀರಿಹೋದ ಕೆಲ ವರ್ಷಗಳ ಬಳಿಕ ಪಂಡಿತ್ ದೇವುಸ್ಕರ್ ಅವರು 'ಸ್ವಾಮೀಜಿ ಅಂದು ನುಡಿದ ಆ ಮಾತುಗಳು ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿವೆ. ಅವನ್ನು ಕೇಳಿದ ಬಳಿಕ ನಿಜವಾದ ದೇಶಭಕ್ತಿ ಎಂದರೇನು ಎಂಬುದು ಮೊದಲ ಬಾರಿ ನನ್ನ ಅರಿವಿಗೆ ಬಂದಿತು' ಎಂದು ಹೇಳಿದ್ದರು.

ಮತ್ತೊಂದು ಸಂದರ್ಭದಲ್ಲಿ ಉತ್ತರ ಭಾರತದ ಪಂಡಿತರೊಬ್ಬರು ವೇದಾಂತದ ಬಗ್ಗೆ ಚರ್ಚಿಸಲು ಸ್ವಾಮೀಜಿಯ ಬಳಿ ಬಂದಿದ್ದರು. ಆ ಸಮಯದಲ್ಲಿ ವ್ಯಾಪಕವಾಗುತ್ತಿದ್ದ ಕ್ಷಾಮವನ್ನು ಹತೋಟಿಗೆ ತರಲು ಸಾಧ್ಯವಾಗದ ಅಸಹಾಯಕತೆಯ ಬಗ್ಗೆ ವಿವೇಕಾನಂದರು ಸಾಕಷ್ಟು ಬೇಸರದಲ್ಲಿದ್ದರು. ಪಂಡಿತರಿಗೆ ಉದ್ದೇಶಿತ ವಿಷಯದ ಬಗ್ಗೆ ಚರ್ಚೆ ನಡೆಸಲು ಅವಕಾಶವನ್ನೇ ಕೊಡದೆ, 'ಪಂಡಿತ್‌ಜಿ ಎಲ್ಲೆಡೆಯೂ ವ್ಯಾಪಿಸಿರುವ ಬರ ಪರಿಸ್ಥಿತಿಯ ಉಪಶಮನಕ್ಕೆ ಮೊದಲು ಪ್ರಯತ್ನಿಸಿ, ಆಹಾರಕ್ಕಾಗಿ ಹಾಹಾಕಾರ ಪಡುತ್ತಿರುವ ದೇಶದ ಜನರ ಹಸಿವು ನೀಗಲು ಮುಂದಾಗಿ. ಬಳಿಕ ವೇದಾಂತದ ಬಗ್ಗೆ ಚರ್ಚಿಸಲು ನನ್ನ ಬಳಿ ಬನ್ನಿ. ಹಸಿವಿನಿಂದ ಸಾಯುತ್ತಿರುವ ಸಾವಿರಾರು ಜನರ ಪ್ರಾಣ ಉಳಿಸಲು ಜೀವನ ಮುಡಿಪಾಗಿಡುವುದೇ ವೇದಾಂತದ ನಿಜವಾದ ಸಾರ' ಎಂದು ಹೇಳಿ ಕಳುಹಿಸಿದರು.

ದೇಶದಲ್ಲಿ ನೈತಿಕ ಅಧಃಪತನ, ಭ್ರಷ್ಟಾಚಾರ, ಮೌಲ್ಯಾಧಾರಿತ ನಾಯಕತ್ವದ ಕೊರತೆ, ಒಗ್ಗೂಡಿಸುವುದರ ಬದಲು ನಿರಂತರವಾಗಿ ಒಡೆದು ಆಳಲು ಮುಂದಾಗುವ ಶಕ್ತಿಗಳು, ಕ್ರೌರ್ಯ ತುಂಬಿ ತುಳುಕಾಡುತ್ತಿರುವ ಈಗಿನ ಸ್ಥಿತಿಯಲ್ಲಿ ದೇಶಭಕ್ತಿ ಮತ್ತು ರಾಷ್ಟ್ರೀಯವಾದದ ಬಗ್ಗೆ ಸ್ವಾಮಿ ವಿವೇಕಾನಂದರು ಹೊಂದಿದ್ದ ಅಂತಃಕರಣದ ಅಗತ್ಯ ಈಗ ನಮಗಿದೆ. ಅವರಿಗಿದ್ದ ಅಂತಹದ್ದೊಂದು ಮನೋಭಾವ ಸಾರ್ವಜನಿಕವಾಗಿ ತೋರುತ್ತಿದ್ದ ಭಾವೋತ್ಕಟತೆ ಮಾತ್ರ ಆಗಿರಲಿಲ್ಲ; ಆಳವಾದ ವಾಸ್ತವಿಕ ನೆಲೆಯಲ್ಲಿ ಕಾರ್ಯರೂಪಕ್ಕೆ ತರುವ ಸಮಗ್ರ ಕ್ರಿಯೆಯಾಗಿತ್ತು. ವಿಧವೆಯರ ಕಣ್ಣೀರು ಒರೆಸುವುದು, ಅನಾಥರಿಗೆ ತುತ್ತು ಅನ್ನ ಕರುಣಿಸುವುದೇ ಇಂತಹ ಸಕಾರಾತ್ಮಕ ಚಿಂತನೆಯ ಅರ್ಥವಾಗಿತ್ತು. ಬಡತನ, ದುಷ್ಟ ಪ್ರವೃತ್ತಿಯ ವಿರುದ್ಧದ ಹೋರಾಟ ಮತ್ತು ಎಲ್ಲ ಸಾರ್ವಜನಿಕ ವ್ಯವಹಾರಗಳಲ್ಲೂ ಸಮಾನತೆ, ನ್ಯಾಯ ಒದಗಿಸುವುದು, ಉತ್ತಮ ನಡವಳಿಕೆ ರೂಪಿಸುವುದೇ ಆಗಿತ್ತು. ಸ್ವಾಮಿ ವಿವೇಕಾನಂದರ ಇಂತಹ ದೂರದೃಷ್ಟಿಯ ಚಿಂತನೆಗಳನ್ನು ಕಾರ್ಯರೂಪಕ್ಕೆ ತಂದಾಗ ಮಾತ್ರ ನವ ಭಾರತ ಉದಯಿಸಲು ಸಾಧ್ಯ.

◆